(ಅ) ತಾ. 26-3-68ರಲ್ಲಿ ಅಂತಹದೊಂದು ಆದೇಶ ಮಾಡಿತ್ತು. ಆದರೆ ತಾ. 14-11-77 ರಲ್ಲಿ ಕೇಂದ್ರ ಸರ್ಕಾರ ತನ್ನ ನಿಲುವನ್ನು ಬದಲಾಯಿಸಿದೆ.

(ಇ) ರಾಷ್ಟ್ರಪ್ರಶಸ್ತಿ ಪಡೆದಿರುವ ಕೆಲವು ಶಿಕ್ಷಕರನ್ನು ಪಠ್ಯಪುಸ್ತಕ ಸಮಿತಿ ಮತ್ತು ಶಿಕ್ಷಕರ ತರ ಬೇತಿ ಸಮಿತಿಯಲ್ಲಿ ನೇಮಿಸಲಾಗಿದೆ ಮತ್ತು ಈ ಕೆಲಸಕ್ಕಾಗಿ ಅವರಿಗೆ ಸಂಭಾವನೆಯನ್ನು ಸಹ ಕೊಡ ಲಾಗಿದೆ. ಇದಲ್ಲದೆ ರಾಷ್ಟ್ರಪ್ರಶಸ್ತಿ ಪಡೆದ ಶಿಕ್ಷಕರುಗಳಿಗೆ ಸಿಗುವ ನಿವೃತ್ತಿ ವೇತನದ ಜೊತೆಗೆ ಗೌರವ ಧನವನ್ನು ಮಂಜೂರು ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಬೈರಪ್ಪಾಜಿ.— ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ದಿನಾಂಕ 26-3-68ರಲ್ಲಿ ಅಂತಹದೊಂದು ಆದೇಶವನ್ನು ಕೇಂದ್ರ ಸರ್ಕಾರ ಮಾಡಿತ್ತು. ಆದರೆ ದಿನಾಂಕ 14-11-77ರಲ್ಲಿ ಆ ಆದೇಶವನ್ನು ಹಿಂದಕ್ಕೆ ತೆಗೆದುಕೊಂಡಿದೆಯೆಂದು ಹೇಳಿದ್ದಾರೆ. ದಯಮಾಡಿ ಮಾನ್ಯ ಮಂತ್ರಿಗಳು ಏತ ಕ್ಕೋಸ್ಕರ ಆ ಆದೇಶವನ್ನು ವಾಪಸ್ಸು ತೆಗೆದುಕೊಳ್ಳಲಾಗಿದೆಯೆಂಬುದನ್ನು ತಿಳಿಸಬೇಕು. ರಾಷ್ಟ್ರ ಪ್ರಶಸ್ತಿ ಪಡೆದಿರತಕ್ಕ 129 ಜನ ಅಧ್ಯಾಪಕರಲ್ಲಿ ಕೆಲವರನ್ನು ಪಠ್ಯಪುಸ್ತಕ ಸಮಿತಿ ಮತ್ತು ಶಿಕ್ಷಕರ ತರ ಬೇತಿ ಸಮಿತಿಯಲ್ಲಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದ್ದೇವೆಂದು ಹೇಳಿದ್ದಾರೆ. 129 ಜನಗಳ ಪೈಕಿ ಇನ್ನೆಷ್ಟು ಜನ ಹಾಗೆಯೇ ಉಳಿದಿದ್ದಾರೆ ? ಉಳಿದವರು ಕೂಡ ದೃಢಕಾಯರಾಗಿದ್ದಾರೆ, ಸೇವೆಸಲ್ಲಿ ಸಲು ಹೆಚ್ಚಿನ ಆಸಕ್ತಿಯನ್ನು ಇಟ್ಟುಕೊಂಡಿದ್ದಾರೆ. ಕೆಲಸ ಮಾಡುವುದಕ್ಕೆ ತಯಾರಾಗಿರುವ ಇಂತಹ ವರಿಗೆ ಯಾವರೀತಿ ಅವಕಾಶ ಒದಗಿಸಿ ಕೊಡುತ್ತೀರಿ? ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದು ಅವರ ಸೇವೆ ಯನ್ನು ರಾಜ್ಯಸರ್ಕಾರಕ್ಕೆ ಪಡೆದುಕೊಳ್ಳುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.— ರಾಷ್ಟ್ರಪ್ರಶಸ್ತಿ ಪಡೆದಿರತಕ್ಕ ಉಪಾಧ್ಯಾಯರುಗಳ ಪೈಕಿ ಪ್ರಾಥಮಿಕ ಶಾಲಾ ಉಪಾಧ್ಯಾಯರು 13 ಜನರಿದ್ದಾರೆ. ಪ್ರೌಢಶಾಲಾ ಉಪಾಧ್ಯಾಯರು 9 ಜನರಿದ್ದಾರೆ. ಒಟ್ಟು 22 ಜನ ಉಪಾಧ್ಯಾಯರುಗಳಿಗೆ ಮಾಹೆಯಾನ ಸ್ವಲ್ಪ ಹೆಚ್ಚಿನ ಹಣವನ್ನು ಕೊಡಬೇಕೆಂದು ಸರ್ಕಾರ ಪರಿ ಶೀಲನೆ ಮಾಡುತ್ತಿದೆ. ರಾಜ್ಯ ಪ್ರಶಸ್ತಿಯನ್ನು ಪಡೆದಿರತಕ್ಕ 56 ಜನ ಪ್ರಾಥಮಿಕ ಶಾಲಾ ಉಪಾ ಧ್ಯಾಯರುಗಳು ಇದ್ದಾರೆ. 28 ಜನ ಪ್ರೌಢಶಾಲಾ ಉಪಾಧ್ಯಾಯರುಗಳು ಇದ್ದಾರೆ. ಇವರು ಒಟ್ಟು 84 ಜನ ಇದ್ದಾರೆ ಇವರಿಗೆ ಮಾಹೆಯಾನ ಹೆಚ್ಚಿಗೆ ಹಣವನ್ನು ಕೊಡಬೇಕೆಂದು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಈಗ ಪಠ್ಯಪುಸ್ತಕ ಸಮಿತಿಯಲ್ಲಿ ಕೆಲಸ ಮಾಡತಕ್ಕವರು ಈ ಕೆಳಕಂಡಂತಿದ್ದಾರೆ:

ಶ್ರೀಯುತರಾದ

1. ರಾಮರೆಡ್ಡಿ
2. ಕೆ. ವೆಂಕಟರಾಮಯ್ಯ
3. ಕೆ. ಎಸ್. ಚಂದ್ರಶೇಖರಯ್ಯ
4. ಎ. ಎಸ್. ಹನುಮಂತಾಚಾರ್

ಇವರನ್ನು ಪಠ್ಯಪುಸ್ತಕ ಸಮಿತಿಯಲ್ಲಿ ಕೆಲಸಮಾಡುವುದಕ್ಕೆ ನೇಮಿಸಿಕೊಂಡಿದ್ದೇವೆ. ಇವರ ಸೇವಾ ಅವಧಿಯನ್ನು ಹೆಚ್ಚಿಸಲಿಕ್ಕೆ ಇದ್ದಂತಹ ಆದೇಶವನ್ನು ಕೇಂದ್ರ ಸರ್ಕಾರ 1977ರಲ್ಲಿ ವಾಪಸ್ಸು ತೆಗೆದು ಕೊಂಡಿದೆ. ನಾವು ನಮ್ಮ ರಾಜ್ಯದಲ್ಲಿ ಅವರಿಗೆ ಗೌರವ ಧನವನ್ನು ಕೊಡಬೇಕು, ಅವರನ್ನು ಉಪ ಯೋಗಿಸಿಕೊಳ್ಳಬೇಕೆಂದು ಚಿಂತನೆ ಮಾಡುತ್ತಿದ್ದೇವೆಂದು ನನ್ನ ಉತ್ತರದಲ್ಲಿ ಹೇಳಿದ್ದೇನೆ.

ವಿಷಯ : ಧಾರವಾಡದಲ್ಲಿರುವ ಶಾರೀರಕ ತರಬೇತಿ ಶಿಕ್ಷಕರಿಂದ ಅನ್ನ ಸತ್ಯಾಗ್ರಹ.

ಪ್ರ. ಸಂಖ್ಯೆ 699 (1328) ಮಾನ್ಯ ಶಿಕ್ಷಣ ಶ್ರೀ ಎಂ. ಜಿ. ಜರತಾರಗರ್ (ಹುಬ್ಬಳ್ಳಿ).— ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ಧಾರವಾಡ ಜಿಲ್ಲೆಯ ಉಪ ನಿರ್ದೇಶಕರ ಕಛೇರಿಯ ಮುಂದೆ ಶಾರೀರಿಕ ಶಿಕ್ಷಕರು ಅನ್ನ ಸತ್ಯಾಗ್ರಹ ಮಾಡುತ್ತಿರುವುದು ಹಾಗೂ ಖಾಸಗೀ ಶಿಕ್ಷಕರ ಹೋರಾಟ ಸಮಿತಿಯವರು 1984ನೇ ಇಸವಿ ಮಾರ್ಚ್ 1ರಿಂದ ಅನ್ನ ಸತ್ಯಾಗ್ರಹ ಕೈಕೊಳ್ಳುವುದಾಗಿ ತಿಳಿಸಿರುವುದು ನಿಜವೇ ;

(ಆ) ಹಾಗಿದ್ದಲ್ಲಿ ಮೇಲ್ಕಂಡ ಸತ್ಯಾಗ್ರಹಗಳಿಗೆ ಕಾರಣಗಳೇನು ;

(ಇ) ಶಾರೀರಿಕ ಶಿಕ್ಷಕರ ಹಾಗೂ ಖಾಸಗಿ ಶಿಕ್ಷಕರ ವೇತನ ಶ್ರೇಣಿಯಲ್ಲಿ ವ್ಯತ್ಯಾಸವಿರುವುದು ನಿಜವೇ ;

(ಈ) ಮೇಲ್ಕಂಡ ಶಿಕ್ಷಕರ ವೇತನ ಶ್ರೇಣಿಯಲ್ಲಿರುವ ತಾರತಮ್ಯವನ್ನು ಸರಿಪಡಿಸುವ ಬಗ್ಗೆ ಸರ್ಕಾರ ದವರನ್ನು ನಿರ್ಣಯದ ಮೂಲಕ ಒತ್ತಾಯಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಹಾಗಿದ್ದಲ್ಲಿ, ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಸಚಿವರು).—

(ಅ) ಹೌದು.

(ಆ) ತಮ್ಮ ಬೇಡಿಕೆಗಳನ್ನು ಈಡೇರಿಸಲು.

(ಇ) (ಈ) ಮತ್ತು (ಉ) ಸರ್ಕಾರಿ ಶಾಲೆ ಹಾಗೂ ಖಾಸಗಿ ಶಾಲೆಗಳಲ್ಲಿರುವ ಶಾರೀರಿಕ ಶಿಕ್ಷಣ ಶಿಕ್ಷಕರ ವೇತನ ಶ್ರೇಣಿಯಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ಆದಾಗ್ಯೂ ಸಿ. ಪಿ. ಇ. ಡಿ. ಪಡೆದ ಶಾರೀರಿಕ ಶಿಕ್ಷಣ ಶಿಕ್ಷಕರ ವೇತನ ಶ್ರೇಣಿಯಲ್ಲಿ ತಾರತಮ್ಯವಿದೆಯೆಂದು ಗಮನಕ್ಕೆ ತಂದಿರುವುದರಿಂದ ಇದನ್ನು ಅನಾಮಲೀಸ್ ಕಮಿಟಿಗೆ ವಹಿಸಲಾಗಿದೆ.

ಅಧ್ಯಕ್ಷರು.— ಪ್ರ. ಸಂಖ್ಯೆ 698 (1246) ಮಾನ್ಯ ಸದಸ್ಯರಾದ ಬಸವರಾಜ ಪಾಟೀಲ ಸದ ಸ್ಯರು ಗೈರುಹಾಜರಾಗಿದ್ದಾರೆ.

ಶ್ರೀ ಎಂ. ಜಿ. ಜರತಾರಗರ್.— ಧಾರವಾಡ ಜಿಲ್ಲೆಯ ಉಪನಿರ್ದೇಶಕರ ಕಛೇರಿಯ ಮುಂದೆ ಶಾರೀರಿಕ ಶಿಕ್ಷಕರು ಮತ್ತು ಖಾಸಗೀ ಶಿಕ್ಷಕರ ಹೋರಾಟ ಸಮಿತಿಯವರು ಕಳೆದ 28 ದಿವಸಗಳಿಂದ ಉಪ ವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಇತರಕ್ಕ ತಾರತಮ್ಯವನ್ನು ಹೋಗಲಾಡಿಸುವುದಕ್ಕೆ ಅನಾಮಲೀಸ್ ಕಮಿಟಿಯನ್ನು ನೇಮಕ ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆ ಕಮಿಟಿಯ ಕಾರ್ಯ ವ್ಯಾಪ್ತಿ ಏನಿದೆ ? ಶಿಕ್ಷಕರ ಬೇಡಿಕೆಗಳನ್ನು ಎಷ್ಟು ದಿವಸಗಳಲ್ಲಿ ಈಡೇರಿಸುತ್ತೀರಿ ? ಅನಾಮಲೀಸ್ ಕಮಿಟಿಯಲ್ಲಿ ಯಾರ್ಯಾರು ಇದ್ದಾರೆ ?

ಶ್ರೀ ಬಿ. ರಾಚಯ್ಯ.— ಅನಾಮಲೀಸ್ ಕಮಿಟಿಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಫೈನಾನ್ಸ್ ಸೆಕ್ರೆಟರಿ ಮತ್ತು ನಮ್ಮ ಇಲಾಖೆಯ ಸೆಕ್ರೆಟರಿಯವರು ಇರುತ್ತಾರೆ. 1970ರಿಂದ 1974 ರವರೆಗೆ ಹೈದರಾಬಾದ್ ಸ್ಕೇಲ್‌ನ್ನು ಶಾರೀರಿಕ ಶಿಕ್ಷಣ ಶಿಕ್ಷಕರಿಗೆ ಕೊಡಲಾಗಿದೆ. ಸಿ. ಪಿ. ಇ. ಡಿ. ತರ ಬೇತಿ ಪಡೆದ ಶಾರೀರಿಕ ಶಿಕ್ಷಣ.ಶಿಕ್ಷಕರಿಗೆ ರೂ. 130-210 ಪೇ ಸ್ಕೇಲ್ ಅನ್ನು ಮುಂದುವರಿಸಿಕೊಂಡು ಬಂದಿದ್ದೇವೆ. ಇದೇ ಸಂದರ್ಭದಲ್ಲಿ ಪೇ ಸ್ಕೇಲ್ ಅನ್ನು ರಿವೈಸ್ ಮಾಡಿದಾಗ 100 ರಿಂದ 220ರ ವರೆಗೆ ಪೇ ಪ್ರೊಟೆಕ್ಷನ್ ಕೊಟ್ಟಿದ್ದೇವೆ. ಶಾರೀರಿಕ ಶಿಕ್ಷಣ ಶಿಕ್ಷಕರು ಈ ರೀತಿ ಮಾಡುವಾಗ ಒಬ್ಬರಿಗೆ ಜಾಸ್ತಿಯಾಗಿದೆ ಮತ್ತೊಬ್ಬರಿಗೆ ಕಡಿಮೆಯಾಗಿದೆ ನಮಗೆ ಪೇ ಸ್ಕೇಲ್ ಗೊತ್ತುಮಾಡಿದೆಯೆಂದು ಹೇಳಿ ದ್ದಾರೆ. ಆದಕ್ಕೋಸ್ಕರ ಅನಾಮಲೀಸ್ ಕಮಿಟಿಗೆ ರೆಫರ್ ಮಾಡಲಾಗಿದೆ. ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಂ. ಜಿ. ಜರತಾರಗರ್.— ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಎಷ್ಟು ದಿವಸ ಆಗು ತ್ತದೆ ಎನ್ನುವುದನ್ನು ತಿಳಿಸುತ್ತೀರಾ ?

ಅಧ್ಯಕ್ಷರು.— ಮಾನ ಮಂತ್ರಿಗಳು ಆದಷ್ಟು ಬೇಗ ಆಗುತ್ತದೆಂದು ಹೇಳಿದ್ದಾರೆ.

ವಿಷಯ : ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸಮಾಡುತ್ತಿರುವ ಉಪಾಧ್ಯಾಯರುಗಳಿಗೆ ವಸತಿ ಸೌಕರ್ಯಗಳು.

ಪ್ರ. ಸಂಖ್ಯೆ 700 (1730) ಶ್ರೀ ಪಿ. ತಿಪ್ಪಯ್ಯ (ಮೂಡಿಗೆರೆ).— ಮಾನ್ಯ ಶಿಕ್ಷಣ ಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೆ ವಸತಿ ಸೌಕರ್ಯದ ಕೊರತೆ ಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಸದರಿ ಕೊರತೆಯನ್ನು ನಿವಾರಿಸಲು ಹುಡ್ಕೊ, ಹಾಗೂ ಗೃಹನಿರ್ಮಾಣ ಮಂಡ ಳಿಯ ವಸತಿಯಿಂದ ವ್ಯವಸ್ಥೆ ಮಾಡಲಾಗುವುದೇ ;

(ಇ) ಈ ರೀತಿ ವ್ಯವಸ್ಥೆ ಮಾಡಿದ್ದಲ್ಲಿ ಶಿಕ್ಷಕರ ಬಹು ಮುಖ್ಯವಾದ ಸಮಸ್ಯೆ ನೀಗಿ ಗ್ರಾಮಾಂತರದ ಶಾಲಾ ಮಕ್ಕಳಿಗೆ ತಮ್ಮ ಹೆಚ್ಚಿನ ಸೇವೆಯು ಆಗುತ್ತದೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಸಚಿವರು).—

(ಅ) ಬಂದಿದೆ.

(ಆ) ಇಲ್ಲ.

(ಇ) ಹಿಂದೆ ಈ ವ್ಯವಸ್ಥೆ ಇತ್ತು. ಆದರೆ ಮನೆಗಳನ್ನು ಕಟ್ಟಿಸಿದರೂ ಅಲ್ಲಿ ಶಿಕ್ಷಕರು ವಾಸಮಾಡು ತ್ತಿರಲಿಲ್ಲವಾದುದರಿಂದ ಆ ಯೋಜನೆಯನ್ನು ನಿಲ್ಲಿಸಲಾಯಿತು.

ಶ್ರೀ ಪಿ. ತಿಪ್ಪಯ್ಯ.— ಹಿಂದೆ ಈ ರೀತಿ ಕಟ್ಟಿಸಿದ ಮನೆಗಳಲ್ಲಿ ಶಿಕ್ಷಕರು ವಾಸಮಾಡುತ್ತಿರಲಿಲ್ಲ ಎನ್ನುವ ಕಾರಣಕ್ಕೆ ಈ ವ್ಯವಸ್ಥೆಯನ್ನು ಕೈಬಿಡತಕ್ಕದ್ದು ಸಮಂಜಸವಾದುದಲ್ಲ. ಇದನ್ನು ಪುನರ್ ಪರಿ